ಮತ್ತೆ ಮತ್ತೆ ವಾಚು ನೋಡಿದೆ. "ಅಯ್ಯೋ, ಲೇಟಾಯಿತು."

"ನೈಸ್ ಟಾಕಿಂಗ್ ಟು ಯೂ ಮೇಂ."

"ನಾನೇ ಮಾತಾಡಿದ್ದು ಇಷ್ಟು ಹೊತ್ತು!?"

ಮತ್ತೆ ಅದೇ ಆಕರ್ಷಕ ನಗು.

ಅದು ಒಂದು ಮಿನಿ ಹಾಲ್. ಸ್ವಾಗತ ಭಾಷಣದಿಂದ ಸೆಮಿನಾರ್ ಪ್ರಾರಂಭವಾಯಿತು. ಇನ್ನೂರು ಜನ ಕುಳಿತುಕೊಳ್ಳುವ ಕೊಠಡಿಯಲ್ಲಿ ಕಾಫೀ ಕೆಫೆಯ ಮುಕ್ಕಾಲು ಭಾಗಕ್ಕಿಂತ ಹೆಚ್ಚಾಗಿ ತಲೆಗಳು ತುಂಬಿದ್ದವು. ಸ್ವಾಗತ ಭಾಷಣ ಮುಗಿದು, ಒಬ್ಬರ ನಂತರ ಒಬ್ಬರು ವೇದಿಕೆಯ ಮೇಲೆ ಮಾತನಾಡಿ ಮುಗಿಸಿದರು. ಯಾವುದೋ ಒಂದು ಪ್ರೆಸೆಂಟೇಷನಿಗಾಗಿ ಹಾಲಿನಲ್ಲಿ ಭಾಷಣಕಾರರೊಬ್ಬರು ಲೈಟನ್ನು ಆರಿಸಿದಾಗಲೇ ತಿಳಿಯಿತು, ಒಂದಿಷ್ಟು ಜನರ ಹೊರತಾಗಿ ತಲೆ ಬಾಗಿಸಿದ ಎಲ್ಲರ ಮುಖದಲ್ಲೂ ತಿಳಿನೀಲಿ ಬೆಳಕು. 'ಕೈಂಡ್ಲಿ ಸ್ವಿಚ್ ಆಫ್ ಯುವರ್ ಮೊಬೈಲ್ ಫೋನ್ಸ್' ಎಂಬ ಸೂಚನೆಯನ್ನು ಕೇಳಿ ಫೋನಿನ ಮೇಲೆ ಬೆರಳಾಡಿಸುತ್ತಿದ್ದವರು ಸೆಟೆದು ಕುಳಿತರು.

ಮಾತಿನಿಂದ ಒಬ್ಬರನ್ನು ವಶೀಕರಿಸಿ, ಗಮನ ಚದುರದಂತೆ ಕೇಳಿಸುವುದು ಒಂದು ವಿಶೇಷ ಸಾಮರ್ಥ್ಯ. ಸಪ್ಪೆ ವಿಷಯವನ್ನೂ ಸಹ ಕೆಲವರಿಂದ ಮಾತ್ರವೇ ಸ್ವಾರಸ್ಯಗೊಳಿಸಲು ಸಾಧ್ಯ. ಎಲ್ಲರಿಗೂ ಆ ಕಲೆ ಕರಗತವಾಗಿರುವುದಿಲ್ಲ. ಟಕ್ ಎಂದು ಬೆಳಗಿನ ಕಾಫೀ ಶಾಪ್ ಸಂಭಾಷಣೆ ನೆನಪಿಗೆ ಬಂತು. ಅದರೊಂದಿಗೆ ಕಾಫಿಗೆ ಹಣ ಕೊಡದೆ ಓಡಿಬಂದದ್ದು ಆಗಲೇ ನೆನಪಾಯಿತು. 'ಸರಿ, ಬ್ರೇಕ್‌ನಲ್ಲಿ ನೆನಪಿಂದ ಹೋಗಿ ಕೊಟ್ಟು ಬರಬೇಕು' ಎಂದು ಮೆದುಳಿಗೆ ಒಂದು ಮೆಸೇಜನ್ನು ಕಳುಹಿಸಿಕೊಟ್ಟೆ. ಮೆದುಳು ಎಚ್ಚರಗೊಂಡಿತು. ಜತೆಗೆ, ಆ ಆಕರ್ಷಕ ನಗುವನ್ನು ನೆನಪುಮಾಡಿತು. ಮೈಕಿನಲ್ಲಿ ಕೇಳಿದ ದನಿ ಮನಸ್ಸಿನೊಳಗೆ ಇಳಿಯಲು ನಿರಾಕರಿಸಿತು.

ಹನ್ನೊಂದು ಗಂಟೆಗೆ ಟೀ ಬ್ರೇಕ್. ಲಾಬಿಯಲ್ಲಿ ಜನ ಹೆಚ್ಚಾಗಿದ್ದರು. ಉಳಿದ ಸೆಮಿನಾರಿನ ಹಾಲುಗಳಲ್ಲೂ ಟೀ ಬ್ರೇಕ್ ಅಂತ ಕಾಣುತ್ತೆ. ಕಾಫೀ ಶಾಪ್.

"ಹಲೋ..." ಅದೇ ಕಾಫಿಯ ದನಿ, ಅದೇ ಆಕರ್ಷಕ ನಗು.

"ಹಲೋ! ನಿಮಗೆ ಟೀ ಬ್ರೆಕಾ?"

"ಹೌದು, ನಿಮಗೆ ಕಾಟ ಕೊಟ್ಟಿದ್ದಕ್ಕೆ ನಾನೇ ಬಿಲ್ ಕೊಟ್ಟುಬಿಟ್ಟೆ."

ನಿರೀಕ್ಷಿಸಿದ್ದೇ.

"ಥ್ಯಾಂಕ್ ಯೂ, ದುಡ್ಡು ತೆಗೆದುಕೊಳ್ಳಿ" ಹಣ ನೀಡಿದೆ.

"ನೋ ಥ್ಯಾಂಕ್ಸ್. ನಾನು ಹಣ ತೆಗೆದುಕೊಳ್ಳಲ್ಲ."

"ಇದನ್ನ ಒಂದು ಸರ್ವೀಸಾಗಿ ಮಾಡ್ತಾ ಇದ್ದೀರಾ?"

ನಗುತ್ತಲೇ, "ಇಷ್ಟೊಂದು ಒಳ್ಳೆಯ ಕೆಲಸ ಎಲ್ಲಾ ಸರ್ವೀಸಿನಲ್ಲಿ ಬರೋದಿಲ್ಲಾ ರೀ..."

"ಪ್ಲೀಸ್ ತೆಗೆದುಕೊಳ್ಳಿ."

"ನಾನು ಹಣ ತೆಗೆದುಕೊಳ್ಳೋದಿಲ್ಲ..."

"ಚೆಕ್ ಅಕ್ಸೆಪ್ಟ್ ಮಾಡ್ತೀರಾ?"

ಅದೇ ನಗು. ಉಳಿದ ಸೆಮಿನಾರನ್ನು ಗಮನಿಸಿದಂತೆಯೇ.

"ಕಾಫಿ ಕೊಡಿಸಿಯೂ ಹಿಂತಿರುಗಿಸಬಹುದು. ಈಗಲೇ ಕೊಡಬೇಕು ಅಂತ ಏನೂ ಇಲ್ಲ..."

ಇದು ಯಾವ ತಲೆನೋವು? ಒಳ್ಳೇ ಬಿಸಿನೆಸ್‌ಮನ್ ಆಗಿರಬೇಕು ಈ ಕಾಫೀಮೆನ್. ಆದರೂ, ತಕ್ಷಣ ಕಾಫೀ ಕೊಡಿಸಲು ಸಾಧ್ಯವಿಲ್ಲ ಎಂದು ಹೇಳಲು ಬಾಯಿ ಬರಲಿಲ್ಲ. ಬಹುಶಃ ನಾನೂ